ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಬೇಲೂರು

ಸಿಸಿ 1000/2016

ಪಿರ್ಯಾದುದಾರರು : ಸರಕಾರ ಪರವಾಗಿ
ಹಳೇಬೀಡು ಪೋಲೀಸ್

ವಿರುದ್ಧ

ಆರೋಪಿ ವಸಂತಕುಮಾರ್ ಬಿನ್ ವೆಂಕಟೇಶ್, 33 ವರ್ಷ ವಯಸ್ಸು, ಅಂಗಡಿಹಳ್ಳಿ ಗ್ರಾಮ, ಮಾದೀಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು.

:: ದೋಷಾರೋಪಣೆ ::

ಶ್ರೀ ನಾಗೇಶ ಸಿ; ಬಿ.ಎ.ಎಲ್ ; ಎಲ್.ಎಲ್.ಬಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ಬೇಲೂರು ಆದ ನಾನು ಆರೋಪಿಯಾದ ನಿನ್ನ ವಿರುದ್ಧ ಈ ಕೆಳಕಂಡಂತೆ ದೋಷಾರೋಪಣೆಯನ್ನು ರಚಿಸುತ್ತಿದ್ದೇನೆಃ-

1. ದಿನಾಂಕಃ 30-06-2016 ರಂದು ರಾತ್ರಿ ಸುಮಾರು 11-30 ಗಂಟೆ ಸಮಯದಲ್ಲಿ ಬೇಲೂರು ತಾಲ್ಲೂಕು ಹಳೇಬೀಡು ಠಾಣಾ ಸರಹದ್ದಿನ ಗೋಣಿಸೋಮನಹಳ್ಳಿ ಗ್ರಾಮದ ಹತ್ತಿರ ಇರುವ ಹುಲಿಕಲ್ಲೇಶ್ವರ ಬೆಟ್ಟದಲ್ಲಿರುವ ಹುಲಿಕಲ್ಲೇಶ್ವರ ದೇವಸ್ಥಾನದ ಮುಂಬಾಗಿಲಿನ ಚಿಲಕವನ್ನು ಆರೋಪಿಯಾದ ನೀನು ಅಕ್ಸೇಲ್ ಬ್ಲೇಡ್‌ನಿಂದ ಕೊಯ್ದು ಅತಿಕ್ರಮವಾಗಿ ದೇವಸ್ಥಾನದ ಒಳ ಪ್ರವೇಶ ಮಾಡಿದ್ದು, ಅದರನ್ವಯ ಭಾರತ ದಂಡ ಸಂಹಿತೆ ಕಲಂ.457 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ ?

2. ಅದೇ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಕಳ್ಳತನ ಮಾಡುವ ಉದ್ದೇಶದಿಂದ ಆರೋಪಿಯಾದ ನೀನು ಹುಲಿಕಲ್ಲೇಶ್ವರ ಬೆಟ್ಟದಲ್ಲಿರುವ ಹುಲಿಕಲ್ಲೇಶ್ವರ ದೇವಸ್ಥಾನದ ಮುಂಬಾಗಿಲಿನ ಚಿಲಕವನ್ನು ಅಕ್ಸೇಲ್ ಬ್ಲೇಡ್‌ನಿಂದ ಕೊಯ್ದು ಅತಿಕ್ರಮವಾಗಿ ಒಳ ಪ್ರವೇಶ ಮಾಡಿ, ಹಾಲ್‌ನಲ್ಲಿದ್ದ ಹುಂಡಿಯನ್ನು ಕಬ್ಬಿಣದ ರಾಡ್‌ನಿಂದ ಒಡೆದು, ಹುಂಡಿಯಲ್ಲಿದ್ದ ಸುಮಾರು ರೂ.5000-00 ಚಿಲ್ಲರೆ ಹಾಗೂ ನೋಟಿನ ಹಣವನ್ನು ಕಳ್ಳತನ ಮಾಡಿದ್ದು, ಅದರನ್ವಯ ಭಾರತ

ದಂಡ ಸಂಹಿತೆ ಕಲಂ.380 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ ?

( ಮೇಲ್ಕಂಡ ಆರೋಪಿಗೆ ದೋಷಾರೋಪಣೆಯ ಸಾರಾಂಶವನ್ನು ಅವರಿಗೆ ತಿಳಿದಿರುವ ಕನ್ನದ ಭಾಷೆಯಲ್ಲಿ ಓದಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ. )

ಸ್ಥಳಃ ಬೇಲೂರು
ದಿನಾಂಕಃ 02-08-2019

(ನಾಗೇಶ ಸಿ. )
ಜೆಎಂಎಫ್‌ಸಿಃಬೇಲೂರು

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಬೇಲೂರು**
**ಸಿಸಿ 1000/2016**

**1ನೇ ಆರೋಪಿಯ ಹೆಸರು : ವಸಂತಕುಮಾರ್**
**ತಂದೆ:ಗಂಡನ ಹೆಸರು : ವೆಂಕಟೇಶ**
**ವಯಸ್ಸು : 33 ವರ್ಷ**
**ವಾಸ ಸ್ಥಳ : ಅಂಗಡಿಹಳ್ಳಿ ಗ್ರಾಮ, ಮಾದೀಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು**

ಪ್ರಶ್ನೆ:1 ನಾನು ತಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರ:

ಪ್ರಶ್ನೆ:2 ಸದರೀ ಆರೋಪಣೆಯನ್ನು ಒಪ್ಪಿಕೊಳ್ಳುವೆಯೋ?
ಅಥವಾ ವಿಚಾರಣೆಯಾಗಬೇಕೋ?
ಉತ್ತರ:

ಮೇಲ್ಕಂಡ ಆರೋಪಿಯ ಪರೀಕ್ಷೆಯನ್ನು ನನ್ನ ಸಮಕ್ಷಮ ಮತ್ತು ವೈಯ್ಯಕ್ತಿಕ ಕೇಳಿಕೆ ಮೇಲೆ ಮಾಡಿಕೊಂಡಿದ್ದು ಮತ್ತು ದಾಖಲಾತಿಯ ಸಂಪೂರ್ಣ ಮತ್ತು ಸತ್ಯವಾದ ಆರೋಪಿಯ ಹೇಳಿಕೆಯನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ:ಬೇಲೂರು
ದಿನಾಂಕ: 02-08-2019 ಜೆಎಂಎಫ್‌ಸಿ:ಬೇಲೂರು